ಚಂದ್ರೋದಯವಾದ ಮೇಲೆ ಅದು ಮರಳಿ ರಾಜಕುಮಾರನ ಬಳಿಗೆ ಹಾರಿ ಬಂತು.

'ನಾನು ನಿನಗೆ ಗುಡ್‌ಬಾಯ್ ಹೇಳಲು ಬಂದಿರುವೆ' ಎಂದು ಸ್ವಾಲೋ ಆತನಿಗೆ ಹೇಳಿತು.

'ಸ್ವಾಲೋ ಸ್ವಾಲೋ, ಪುಟ್ಟ ಸ್ವಾಲೋ, ಇನ್ನೊಂದು ರಾತ್ರಿ ನೀನು ನನ್ನ ಜೊತೆ ಕಳೆಯಲಾರೆಯಾ?' ರಾಜಕುಮಾರ ಮತ್ತೆ ಅಂಗಲಾಚಿದ.

'ಇದೀಗ ಮೈಕೊರೆಯುವ ಚಳಿಗಾಲ' ಸ್ವಾಲೋ ಹೇಳತೊಡಗಿತು. 'ಇಷ್ಟರಲ್ಲಿ ಇಲ್ಲಿ ಹಿಮ ಬೀಳಲಿದೆ. ಇಜಿಪ್ಟಿನಲ್ಲಿ ತಾಳೆ ಮರಗಳ ಮೇಲೆ ಈಗ ಬೆಚ್ಚನೆಯ ಬಿಸಿಲು ಬಿದ್ದಿದೆ, ಕೆಸರಿನಲ್ಲಿ ಮಲಗಿರುವ ಮೊಸಳೆಗಳು ಆ ಮರಗಳತ್ತ ಆಲಸ್ಯದಿಂದ ನೋಡುತ್ತಿವೆ. ನನ್ನ ಸಹಚರರು ಬಾಲ್‌ಬೆಕ್ ಮಂದಿರದಲ್ಲಿ ಗೂಡು ಕಟ್ಟಿಕೊಳ್ಳುತ್ತಿದ್ದಾರೆ. ಗುಲಾಬಿ ಹಾಗೂ ಶ್ವೇತವರ್ಣದ ಪಾರಿವಾಳಗಳು ಅವರನ್ನು ನೋಡುತ್ತ ಕುಳಿತು ತಮ್ಮ ತಮ್ಮೊಳಗೆ ಗುಟುರುತ್ತಿವೆ. ನನ್ನ ಪ್ರೀತಿಯ ರಾಜಕುಮಾರನೆ, ನಿನ್ನನ್ನು ತೊರೆದು ನಾನು ಹೋಗಲೇಬೇಕು. ಆದರೆ ನಾನು ನಿನ್ನನ್ನೆಂದೂ ಮರೆಯಲಾರೆ. ಮುಂದಿನ ವಸಂತಕಾಲಕ್ಕೆ ನಾನು ಮರಳಿ ಬರುವಾಗ ನಿನಗಾಗಿ ಎರಡು ರತ್ನಗಳನ್ನು ತರುವೆ. ಅವುಗಳಲ್ಲಿ ಒಂದು ಮಾಣಿಕ್ಯ ಗುಲಾಬಿಗಿಂತ ಕೆಂಪಾಗಿರುತ್ತದೆ ಹಾಗೂ ಇನ್ನೊಂದು ರತ್ನ ಸಾಗರದಷ್ಟೇ ನೀಲಿಯಾಗಿರುತ್ತದೆ.'

'ಕೆಳಗೆ ಕಾಣುವ ಚೌಕಿಯಲ್ಲಿ ಬೆಂಕಿ ಪೊಟ್ಟಣ ಮಾರುವ ಓರ್ವ ಪುಟ್ಟ ಬಾಲಕಿ ನಿಂತಿದ್ದಾಳೆ. ಆಕೆಯ ಬೆಂಕಿ ಪೊಟ್ಟಣಗಳೆಲ್ಲ ಕೈಜಾರಿ ಗಟಾರಿನಲ್ಲಿ ಬಿದ್ದು ಅವು ಹಾಳಾಗಿ ಹೋಗಿವೆ. ಮಾರಿದ ಹಣ ಮನೆಗೆ ಒಯ್ಯದಿದ್ದರೆ ಅವಳ ತಂದೆ ಆಕೆಯನ್ನು ಹೊಡೆಯುತ್ತಾನೆ. ಆ ಕಾರಣಕ್ಕಾಗಿ ಆಕೆ ಅಳುತ್ತಿದ್ದಾಳೆ. ಬೂಟು ಹಾಗೂ ಕಾಲುಚೀಲಗಳಿಲ್ಲದೆ ಆಕೆ ಬರಿಗಾಲಲ್ಲಿ ನಿಂತಿದ್ದಾಳೆ. ಅಲ್ಲದೆ ಆಕೆಯ ಪುಟ್ಟ ತಲೆಗೆ ವಸ್ತ್ರ ಕೂಡ ಇಲ್ಲ. ನನ್ನ ಇನ್ನೊಂದು ಕಣ್ಣಿನ ರತ್ನವನ್ನು ಕಿತ್ತು ಒಯ್ದು ಅವಳಿಗೆ ಕೊಟ್ಟುಬಿಡು. ಆಗ ಅವಳ ತಂದೆ ಆಕೆಯನ್ನು ಹೊಡೆಯಲಾರ.'

'ಆಗಲಿ, ನಿನ್ನ ಬಯಕೆಯಂತೆ ಇನ್ನೊಂದು ರಾತ್ರಿ ನಾನು ನಿನ್ನ ಜೊತೆ ಕಳೆಯುವೆ. ಆದರೆ ನಿನ್ನ ಇನ್ನೊಂದು ಕಣ್ಣು ಕೀಳಲಾರೆ. ಹಾಗೆ ಮಾಡಿದರೆ ನೀನು ಸಂಪೂರ್ಣ ಕುರುಡನಾಗುವೆ' ಎಂದಿತು ಸ್ವಾಲೋ.

'ಸ್ವಾಲೋ, ಸ್ವಾಲೋ, ಪುಟ್ಟ ಸ್ವಾಲೋ, ಹಾಗೆನ್ನಬೇಡ ದಯವಿಟ್ಟು ನನ್ನ ಇದೊಂದು ಆಜ್ಞೆಯನ್ನು ಪಾಲಿಸು' ರಾಜಕುಮಾರ ಮತ್ತೆ ಮತ್ತೆ ಅಂಗಲಾಚಿದ.

ರಾಜಕುಮಾರನ ಕೋರಿಕೆಯಂತೆ ಸ್ವಾಲೋ ಇನ್ನೊಂದು ಕಣ್ಣನ್ನು ಕಿತ್ತುಕೊಂಡು ಕೆಳಗೆ ಬೆಂಕಿಪೊಟ್ಟಣ ಮಾರುವ ಹುಡುಗಿಯ ಬಳಿಗೆ ಹೋಗಿ ಅವಳ ಅಂಗೈಯಲ್ಲಿ ಆ ರತ್ನದ ಹರಳನ್ನು ಜಾರಿಸಿತು. 'ಎಂಥ ಆಕರ್ಷಕ ಗಾಜು ಇದು!' ಎಂದು ದೊಡ್ಡ ದನಿಯಲ್ಲಿ ಚೀರುತ್ತ, ನಗುನಗುತ್ತ ಆಕೆ ಮನೆಗೆ ಓಡಿದಳು.

ಅನಂತರ ಸ್ವಾಲೋ ಮರಳಿ ರಾಜಕುಮಾರನ ಬಳಿಗೆ ಬಂತು. 'ಈಗ ನೀನು ಸಂಪೂರ್ಣ ಕುರುಡನಾಗಿರುವೆ, ಆದ್ದರಿಂದ ನಾನೀಗ ಸದಾ ನಿನ್ನ ಜೊತೆಯಲ್ಲೇ ಇರುವೆ' ಸ್ವಾಲೋ ನಿರ್ಧಾರದ ದನಿಯಲ್ಲಿ ಹೇಳಿತು.

'ಬೇಡ, ಬೇಡ, ಸ್ವಾಲೋ, ನೀನು ಇಜಿಪ್ಟಿಗೆ ಹೋಗಲೇಬೇಕು' ಆ ಬಡಪಾಯಿ ರಾಜಕುಮಾರ ಒತ್ತಾಯಿಸಿದ.

'ಇಲ್ಲ, ಇಲ್ಲ, ನಾನಿನ್ನು ಸದಾ ನಿನ್ನ ಜೊತೆಯಲ್ಲೇ ಇರುವೆ' ಎಂದು ಹೇಳಿ, ಸ್ವಾಲೋ ಆತನ ಪಾದಗಳ ನಡುವೆ ಮಲಗಿತು.